4. ಸುತ್ತೋಲೆಗಳ ಮೂಲಕ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.
5. ಸ್ಯಾಟ್‌ಕಾಮ್ ಮೂಲಕ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಯ ಅಧಿಕಾರಿಗಳಿಗೆ ತರಬೇತಿ ನೀಡಲಾಗಿದೆ.
6. ಆಡಳಿತಾತ್ಮಕ ಮತ್ತು ತಾಂತ್ರಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳಿಗೆ ಉತ್ತರಗಳನ್ನು (FAQ) ಇಲಾಖೆಯ ಅಧಿಕಾರಿಗಳು ಮತ್ತು ಎನ್.ಐ.ಸಿ. ಅಧಿಕಾರಿಗಳಿಂದ ನೀಡಲು ಕ್ರಮ ವಹಿಸಲಾಗಿದೆ.
7. ಕ್ರಮಬದ್ಧ ಆಸ್ತಿಗಳಿಗೆ ನಮೂನೆ–9, 11ಎ ಮತ್ತು ಕ್ರಮಬದ್ಧವಲ್ಲದ ಆಸ್ತಿಗಳಿಗೆ ನಮೂನೆ–11ಬಿ ಯನ್ನು ಮಾತ್ರ ನೊಂದಣಿಗೆ ಪರಿಗಣಿಸಲು ಹಾಗೂ ನಮೂನೆ–9 ಕ್ಕೆ ನಮೂನೆ–11ಬಿ ರ ಅವಶ್ಯಕತೆ ಇಲ್ಲವೆಂದು ಉಪನೊಂದಣಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ.
8. ದಿನಾಂಕ:23.06.2014ರಂದು ಉತ್ತರ ಕನ್ನಡದ ಅರಣ್ಯ ಪ್ರದೇಶದಲ್ಲಿನ ಆಸ್ತಿಗಳಿಗೆ ಸಂಬಂಧಪಟ್ಟಂತೆ ಜನಪ್ರತಿನಿಧಿಗಳ ಮತ್ತು ಅಧಿಕಾರಿಗಳ ಸಭೆಯನ್ನು ನಡೆಸಲಾಗಿದೆ.

ಉದ್ಯೋಗ ಖಾತ್ರಿ ಯೋಜನೆ ಕಾಮಗಾರಿ

1490(2352), ಶ್ರೀ ಮಕಬುಲ್ ಎಸ್.ಬಾಗವಾನ್ (ಬಿಜಾಪುರ ನಗರ)

ಅ) ಕಳೆದ ಮೂರು ವರ್ಷಗಳಲ್ಲಿ ವಿಜಾಪುರ (ನಗರ) ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯತ್‌ಗಳಿಗೆ ಉದ್ಯೋಗ ಖಾತ್ರಿ ಯೋಜನೆಗೆ ಮಂಜೂರಾದ ಅನುದಾನವೆಷ್ಟು; (ವಿವರ ನೀಡುವುದು);

ಆ) ಈ ಯೋಜನೆಯಡಿಯಲ್ಲಿ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ;

ಇ) ಈ ಅವಧಿಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಎಷ್ಟು ಗ್ರಾಮ ಪಂಚಾಯತ್‌ಗಳಿಗೆ ಇದರ ಲಾಭ ದೊರಕಿದೆ; ಪ್ರತಿಯೊಂದು ಗ್ರಾಮ ಪಂಚಾಯತಿಗೆ ಬಿಡುಗಡೆಯಾದ ಅನುದಾನವೆಷ್ಟು; ಯಾವ ಯಾವ ರೈತರು ಇದರ ಉಪಯೋಗ ಪಡೆದಿರುತ್ತಾರೆ; (ಗ್ರಾಮ ಪಂಚಾಯತ್‌ವಾರು ವಿವರ ನೀಡುವುದು)?

ಶ್ರೀ ಹೆಚ್.ಕೆ.ಪಾಟೀಲ್(ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ವಿಜಾಪುರ (ನಗರ) ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ತೊರವಿ ಗ್ರಾಮ ಪಂಚಾಯತಿಯ ತೊರವಿ ಗ್ರಾಮ ಮಾತ್ರ ಬರುತ್ತದೆ. ಈ ಗ್ರಾಮದಲ್ಲಿ ಕಳೆದ 3 ವರ್ಷಗಳಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮಂಜೂರಾದ ಅನುದಾನದ ವಿವರಗಳು ಈ ಕೆಳಗಿನಂತಿದೆ.

ಕ್ರ.ಸಂ.	ವರ್ಷ	ಮಂಜೂರಾದ ಅನುದಾನ (₹ ಲಕ್ಷಗಳಲ್ಲಿ)
1	2011–12	21.26
2	2012–13	13.55
3	2013–14	13.55

ಆ) ಎಂ.ಜಿ.ಎನ್.ಆರ್.ಇ.ಜಿ.ಎಸ್. ಯೋಜನೆಯಡಿ ಈ ಕೆಳಕಂಡ ಪ್ರವರ್ಗಗಳ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

- ಅರಣ್ಯೀಕರಣ

- ನೀರಾವರಿ ಸೌಲಭ್ಯ
- ಜಮೀನು ಅಭಿವೃದ್ಧಿ
- ತೋಟಗಾರಿಕೆ
- ಸರ್ವ ಋತು ರಸ್ತೆ ನಿರ್ಮಾಣ ಕಾಮಗಾರಿಗಳು

ಇ) • ಕಳೆದ 3 ವರ್ಷಗಳಲ್ಲಿ ವಿಜಾಪುರ (ನಗರ) ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ತೊರವಿ ಗ್ರಾಮ ಪಂಚಾಯತಿಯ ತೊರವಿ ಗ್ರಾಮ ಮಾತ್ರ ಈ ಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಇದರ ಲಾಭ ಪಡೆದಿರುತ್ತದೆ. ಸದರಿ ತೊರವಿ ಗ್ರಾಮ ಪಂಚಾಯತಿಯ ತೊರವಿ ಗ್ರಾಮಕ್ಕೆ ಈ ಅವಧಿಯಲ್ಲಿ ಬಿಡುಗಡೆಯಾದ ಅನುದಾನದ ವಿವರಗಳು ಈ ಕೆಳಗಿನಂತಿದೆ.

ಕ್ರ.ಸಂ.	ವರ್ಷ	ಬಿಡುಗಡೆಯಾದ ಅನುದಾನ (₹ ಲಕ್ಷಗಳಲ್ಲಿ)
1	2011–12	10.00
2	2012–13	5.00
3	2013–14	3.87

• ವಿಜಾಪುರ (ನಗರ) ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ತೊರವಿ ಗ್ರಾಮ ಪಂಚಾಯತಿಯ ತೊರವಿ ಗ್ರಾಮದ ಸಣ್ಣ, ಅತಿಸಣ್ಣ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರು ಈ ಯೋಜನೆಯ ಉಪಯೋಗವನ್ನು ಪಡೆದಿರುತ್ತಾರೆ.